**ದಿನಾಂಕಃ 06.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಓ ಜೆ ವಕೀಲರಿಂದಃ-**

ನಿಸಿ-1 ರ ದಾಖಲೆಯನ್ನು ಹೊರತುಪಡಿಸಿ ಬೇರೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಮುಂದಿನ ತಿಂಗಳು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ರ ಆಸ್ತಿಯು ಇ ಹಿಂದೆ ನನ್ನ ಹೆಸರಿನಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ ಅದರ ಎಡಭಾಗದಲ್ಲಿರುವ ಮನೆ ನಮ್ಮದು ಹಾಗೂ ಬಲಭಾಗದಲ್ಲಿ ಕಂಡುಬರುವ ಹೆಂಚಿನ ಮನೆ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಛಾಯಚಿತ್ರದ ಮಧ್ಯದಲ್ಲಿ ಗಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿರುವ ಅಸಸ್ಮೆಂಟ್ ಕೊಟ್ಟೂರಮ್ಮ ರವರ ಹೆಸರಿಗೆ ಇರುತ್ತದೆ. ಕೊಟ್ಟೂರಮ್ಮ ರವರಿಗೆ ಆಸ್ತಿಯು ನನ್ನ ತಂದೆಯ ಮೂಲಕ ಬಂತು. ಆಸ್ತಿಯು ನನ್ನ ಹೆಸರಿಗೆ ಬಂದು ನಂತರ ನನ್ನ ಹೆಂಡತಿ ಹೆಸರಿಗೆ ಹೋಗಿರುತ್ತದೆ. ನನ್ನ ಹೆಸರಿನಿಂದ ನನ್ನ ಹೆಂಡತಿ ಹೆಸರಿಗೆ ಖಾತೆ ಮಾಡಲು ಪಂಚಾಯ್ತಿ ಕಛೇರಿಯಲ್ಲಿ ಈ ಸ್ವತ್ತು ಬರೆಸಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ನನ್ನ ಹೆಂಡತಿ ಹೆಸರಿಗೆ ನೊಂದಾಯಿತ ದಾನಪತ್ರವಾಗಲೀ ಕ್ರಯಪತ್ರವಾಗಲೀ ಮಾಡಿಸಿಲ್ಲ ಎಂದರೆ ಸರಿ. ಪಂಚಾಯ್ತಿಯವರು ನನ್ನ ಹೇಳಿಕೆ ಮೇರೆಗೆ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಂಡತಿ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ ಹೊರತು ಯಾವುದೇ ನೊಂದಾವಣೆ ಪತ್ರದ ಮೂಲಕ ವರ್ಗಾವಣೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಡಿ-1 ರ ಮಧ್ಯಭಾಗದಲ್ಲಿ ಕಂಡುಬರುವ ಗಲ್ಲಿಯನ್ನು ನಿಪಿ-1 ರ ಅಸಸ್ಮೆಂಟ್ ನಲ್ಲಿ ಪಂಚಾಯ್ತಿ ಅಧಿಕಾರಿಗಳೊಂದಿಗೆ ಪ್ರಬಾವ ಬೀರಿ ನಮೂದಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಗಲ್ಲಿಯು ಅಲ್ಲಿ ಈ ಹಿಂದಿನಿಂದಲೂ ಇತ್ತು ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿರುವ ಪ್ರತಿವಾದಿಗಳ ಮನೆಯ ಎಡಭಾಗದಲ್ಲಿ ಹಿತ್ತಲು ಇದೆ ಎಂದರೆ ಅದು ಗಲ್ಲಿ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿರುವ ಗಲ್ಲಿ ನನ್ನ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಇ ಸ್ವತ್ತನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮತ್ತು ಪ್ರತಿವಾದಿಗಳ ಸ್ವತ್ತನ್ನು ನ್ಯಾಯಾಲಯದ ನಿಯೋಗಿ ಮೂಲಕ ಅಳತೆ ಮಾಡಿಸಲು ನನ್ನ ಯಾವುದೇ ತಕರಾರು ಇಲ್ಲಾ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಂದೆ ಹೆಸರಿಗೆ ಹೇಗೆ ಬಂತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯು ನನ್ನ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಮನೆ ಕಟ್ಟಿ ನಂತರ ಅದನ್ನು ನನ್ನ ಹೆಂಡತಿ ಹೆಸರಿಗೆ ವರ್ಗಾಯಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು ಅವರ ಸ್ವತ್ತನ್ನು ಕ್ರಯಕ್ಕೆ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ.

ನನ್ನ ತಂದೆ ಈ ಹಿಂದೆ ಊರಿನ ಪಟೇಲರಾಗಿದ್ದರು ಎಂದರೆ ಸರಿ. ನನ್ನ ತಂದೆಯವರು ಪಟೇಲರಾಗಿದ್ದ ಕಾರಣ ದಾವಾ ಆಸ್ತಿಯ ಖಾತೆಯನ್ನು ನನ್ನ ತಂದೆಯವರು ಅವರ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ನಿಪಿ-1 ರ ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಮೇಲೆ ಹಕ್ಕು ಅಧಿಕಾರ ಇದ್ದ ಪಕ್ಷದಲ್ಲಿ ಅದರ ಮೂಲ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ದಾಖಲೆಗಳನ್ನು ಮುಂದಿನ ತಿಂಗಳು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲದೇ ಇರುವ ಕಾರಣ ಪ್ರತಿವಾದಿಗಳು ತೊಂದರೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಂದಾಯ ರಶೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಮುಂದಿನ ತಿಂಗಳು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.